**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/163/ಇಸಿಎಸ್(3)/2018

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 09.09.2019.

**ಸುತ್ತೋಲೆ**

ವಿಷಯ : ಸಕಾಲ ಸೇವೆಗಳನ್ನು ಸೇವಾ ಸಿಂಧು ಯೋಜನೆಯ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/163/ಇಸಿಎಸ್(3)/2018, ದಿನಾಂಕ: 09.04.2019.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/163/ಇಸಿಎಸ್(3)/2018, ದಿನಾಂಕ: 11.06.2019.
3. ಅಪರ ಮಿಷನ್ ನಿರ್ದೇಶಕರು-2, ಸಕಾಲ ಮಿಷನ್ ಇವರ ಸಭಾ ಸೂಚನ ಪತ್ರ ಸಂಖ್ಯೆ: ಸಿಆಸುಇ 20 ನಾಸೇಕಾ 2019, ದಿನಾಂಕ: 30.08.2019.
4. ದಿನಾಂಕ: 03.09.2019 ರಂದು ಸನ್ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಇವರು ನಡೆಸಿದ ವಿಡಿಯೋ ಸಂವಾದ ಹಾಗೂ ಮಾನ್ಯ ಸಚಿವರು ನೀಡಿದ ಸೂಚನೆಗಳು.

*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸುತ್ತೋಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 11 ಇಜಿಒವಿ ಬೆಂಗಳೂರು, ದಿನಾಂಕ: 07.03.2019 ರನ್ವಯ ತಾಂತ್ರಿಕ ಪರೀಕ್ಷಾ ಮಂಡಳಿಯ ಸಕಾಲ ಸೇವೆಗಳನ್ನು ಪಡೆಯಲು ಆನ್‌ಲೈನ್ ತಂತ್ರಾಂಶದ (ಸೇವಾ ಸಿಂಧು) ಮೂಲಕ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬೇಕಾಗಿರುತ್ತದೆ ಎಂದು ತಿಳಿಸಲಾಗಿತ್ತು.

ಉಲ್ಲೇಖ (2) ರ ಈ ಕಛೇರಿ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು ಸೇವಾ ಸಿಂಧು ತಂತ್ರಾಶದ ಮೂಲಕ ತಮ್ಮ ಸಂಸ್ಥೆಯಲ್ಲಿ ಸ್ವೀಕೃತವಾದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ತ್ವರಿತವಾಗಿ ಮುಂದಿನ ಕ್ರಮಕ್ಕಾಗಿ ಕಡ್ಡಾಯವಾಗಿ ತಾಂತ್ರಿಕ ಪರೀಕ್ಷಾ ಮಂಡಳಿಗೆ ಆನ್‌ಲೈನ್ ತಂತ್ರಾಂಶದ (ಸೇವಾ ಸಿಂಧು) ಮೂಲಕವೇ ಕಳುಹಿಸಲು ಸೂಚಿಸಲಾಗಿದೆ.

ದಿನಾಂಕ: 03.09.2019 ರಂದು ಸನ್ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು, ಸಕಾಲ ಸೇವೆಗಳ ಸಮರ್ಪಕ ಅನುಷ್ಠಾನದ ಬಗ್ಗೆ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿರುತ್ತಾರೆ. ವಿಡಿಯೋ ಸಂವಾದದಲ್ಲಿ ಸಕಾಲ ಸೇವೆಗಳಿಗೆ ಸಲ್ಲಿಸುವ ಅರ್ಜಿಗಳನ್ನು ಕಡ್ಡಾಯವಾಗಿ ಸೇವಾ ಸಿಂಧು ಆನ್‌ಲೈನ್ ತಂತ್ರಾಶದ ಮೂಲಕವೇ ಕಡ್ಡಾಯವಾಗಿ ಸಲ್ಲಿಸಬೇಕು ಎಂದು ಆದೇಶಿಸಿರುತ್ತಾರೆ. ಯಾವುದೇ ಕಾರಣಕ್ಕೂ ಅರ್ಜಿಗಳನ್ನು ಆಫ್‌ಲೈನ್‌ನಲ್ಲಿ ಸ್ವೀಕರಿಸಬಾರದು, ಆಫ್‌ಲೈನ್‌ನಲ್ಲಿ ಸ್ವೀಕರಿಸಿದ್ದು ಕಂಡುಬಂದಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟವಾಗಿ ಸೂಚನೆ ನೀಡಿರುತ್ತಾರೆ.

.....2

ಆದಕಾರಣ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು ತಮ್ಮ ಸಂಸ್ಥೆಯಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಸೇವಾ ಸಿಂಧು ತಂತ್ರಾಶದ ಮೂಲಕ ನಿಯಮಾನುಸಾರ ಪರಿಶೀಲಿಸಿ ತ್ವರಿತವಾಗಿ ಮುಂದಿನ ಕ್ರಮಕ್ಕಾಗಿ **ಕಡ್ಡಾಯವಾಗಿ** ತಾಂತ್ರಿಕ ಪರೀಕ್ಷಾ ಮಂಡಳಿಗೆ ಆನ್‌ಲೈನ್ ತಂತ್ರಾಂಶದ (ಸೇವಾ ಸಿಂಧು) ಮೂಲಕವೇ ಕಳುಹಿಸಲು ಸೂಚಿಸಲಾಗಿದೆ.

ಇನ್ನು ಮುಂದೆ ಆಫ್‌ಲೈನ್‌ನಲ್ಲಿ ಕಳುಹಿಸುವ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಪ್ರಾಚಾರ್ಯರೇ ನೇರ ಹೊಣೆಗಾರರಾಗಿರುತ್ತಾರೆ ಎಂದು ತಿಳಿಸಲಾಗಿದೆ.

ಸಕಾಲ ಮತ್ತು ಸೇವಾ ಸಿಂಧು ಸೇವೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ https://Serviceonline.gov.in/Karnataka ವೆಬ್‌ಪುಟವನ್ನು ನೋಡಬಹುದು.

09/09/19

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ
9/9/19.

ಲಗತ್ತುಗಳು :

1. PPT On Seva Sindhu
2. Services under Seva Sindhu

ಇವರಿಗೆ : ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ :

1. ಇ-ಆಡಳಿತ – ಅಂತರ್ಜಾಲದಲ್ಲಿ ಪ್ರಕಟಿಸಲು.
2. ಕಾರ್ಯದರ್ಶಿಯವರ ಆಪ್ತಶಾಖೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ತಾಂತ್ರಿಕ ಪರೀಕಾ ಮಂಡಳಿಯ ಎಲ್ಲಾ ಅಧಿಕಾರಿಗಳು/ಸಿಬ್ಬಂದಿ ವರ್ಗದವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.

# “One Act many Reforms”

# Guarantee of services to citizens under the Karnataka Sakala Services Act, 2011 and (Amendment) Act, 2014

# Sakala Journey

a) Pilot launch in 4 talukas (administrative sub divisions) on 1st of March 2012.

b) At the end of the year 2012, 278 services had been included.

c) As on 31 August 2019, 1016 services are notified under Sakala services act - The highest ever in the Country!



# HALLMARK

- Karnataka Sakala Services Act, 2011 and (Amendment Act), 2014
- Sakala is a flagship program of GOK

  –1016 services from 91 Departments/Institutions are delivered in a time-bound manner.
- IT system in place to bring all services online (Seva Sindhu)

  https://sevasindhu.karnataka.gov.in/Sevasindhu/Kannada?ReturnUrl=%2F
- Sustainability of project for 8 years reflects its acceptance by all stakeholders
- Awards – PM Award for Excellence in Public Administration, National Award for e-Governance, CAPAM Award

# Challenges

- Average Receipts per day is going down.
  - Sakala system getting by passed?

Avg. Receipts ( District Wise)

- Over dues/Delayed disposals are going up.

Overdue Count/Delayed disposal (District Wise)

- Rejection rates are going up.

Rejection (District wise)

- Awareness going down.
  - Shown in the decrease in effective usage of Sakala Call Centre – 080 4455 4455.

Call Reports (District Wise)

# Challenges

- Review meetings of Sakala are not happening every month from DCs as per government order SiASUE 66 EKaA date 13-03-2012.

G.O

- Inspection of Designated Offices by DCs, CEOs, SPs, ADCs , Tahshildars not conducted regularly.

- Wrong updation about disposals by Designated Officers (Not disposed but updated as disposed)

# Actions to be Taken

**Sec:3(2) All 24,000 designated offices shall mandatory have the Sakala Notice Board, displaying all the citizen related services delivered by that Designated office.**

**Sec:5(1) Mandatory acknowledgement for all applications seeking notified Sakala Services**

| Zero Receipts (District wise) |
|---|

**Sec:5(2) In-time Disposals by Designated Officers**

| District | Overdue | Delayed Disposal |
|---|---|---|

**Sec:14(4) In-time disposal of Services & Appeals . If more than 7 defaults – Disciplinary actions must be taken.**

| District | >7 defaults | How many D.E |
|---|---|---|

# Compensation to Citizen

- Sec 11(4): After giving compensatory cost to the aggrieved citizen and within thirty days thereafter, the competent officer shall update debit note in the HRMS software against the officer found guilty by following the principles of natural justice.

# Rewards

- Better performing Departmental Designated Officers/DeputyCommissioner/H.O.D/Secretaries /Principal Secretaries will be honored with certificates, Citations & cash rewards by Government every month.

# Appreciation Certificates Issued





**ಕರ್ನಾಟಕ ಸರ್ಕಾರ**

**ಪ್ರಶಂಸಾ ಪತ್ರ**

ಶ್ರೀಮತಿ / ಶ್ರೀ ________ ರವರು ________ ಜಿಲ್ಲೆಯ ________ ತಾಲ್ಲೂಕು ________ ಕಚೇರಿಯಲ್ಲಿ ________ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಸಕಾಲ ಸೇವೆಗಳ ಅಧಿನಿಯಮದಡಿ ________ ಮಾಹೆಯಲ್ಲಿ ________ ಸೇವೆಗಳನ್ನು ನಿಗದಿತ ಕಾಲಮಿತಿಯಡಿಯಲ್ಲಿ ರಾಜ್ಯದ ನಾಗರೀಕರಿಗೆ ಒದಗಿಸಿ ತಮ್ಮ ಕರ್ತವ್ಯ ಪ್ರಜ್ಞೆಯಿಂದ ಸಕಾಲ ಸೇವೆಗಳ ಜಾರಿಯಲ್ಲಿ ಪ್ರಮುಖ ಪಾತ್ರ ವಹಿಸಿರುತ್ತೀರಿ. ತಮ್ಮ ಕಾರ್ಯ ವೈಖರಿ ಪ್ರಶಂಸೆಗೆ ಅರ್ಹವಾಗಿದ್ದು, ಸಕಾಲ ಮಿಷನ್ ವತಿಯಿಂದ ತಮಗೆ ಅಭಿನಂದನೆಗಳು.

ತಾವು ತಮ್ಮ ಮುಂದಿನ ಸೇವಾ ಅವಧಿಯಲ್ಲಿ ಮತ್ತಷ್ಟು ಉತ್ಸುಕತೆಯಿಂದ ಜನಪರವಾಗಿ ಸರ್ಕಾರಿ ಸೇವೆಯನ್ನು ನಿರ್ವಹಿಸುವಂತೆ ಹಾರೈಸುತ್ತೇನೆ.



ಜಿಲ್ಲಾಧಿಕಾರಿ

________ ಜಿಲ್ಲೆ



# Discussions

- Top 3 DCs will share their experience with respect to high performance

- Bottom 3 DCs will share the reasons for low performance

- 4 Regional Commissioners will share their opinions and provide suggestions for success of Sakala

**ಪ್ರಸ್ತುತ ತಾಂತ್ರಿಕ ಶಿಕ್ಷಣ ಇಲಾಖೆಯ ಈ ಕೆಳಕಂಡ 13 ಸೇವೆಗಳನ್ನು "ಸೇವಾ ಸಿಂಧು" ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ.**

1) ಮೂಲ ಡಿಪ್ಲೊಮಾ ಪ್ರಮಾಣ ಪತ್ರಕ್ಕಾಗಿ ಅರ್ಜಿ
2) ಉತ್ತರ ಪತ್ರಿಕೆಗಳ ಪೋಟೋಪ್ರತಿಗಾಗಿ ಅರ್ಜಿ
3) ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನಕ್ಕಾಗಿ ಅರ್ಜಿ
4) ನಕಲು ಡಿಪ್ಲೊಮಾ ಪ್ರಮಾಣ ಪತ್ರಕ್ಕಾಗಿ ಅರ್ಜಿ
5) ನಕಲು ಡಿಪ್ಲೊಮಾ ಅಂಕಪಟ್ಟಿಗಾಗಿ ಅರ್ಜಿ
6) ಪಠ್ಯಕ್ರಮ ದೃಢೀಕರಣಕ್ಕಾಗಿ ಅರ್ಜಿ
7) ಡಿಪ್ಲೊಮಾ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳ ನೈಜತೆ ಪರಿಶೀಲನೆಗಾಗಿ ಅರ್ಜಿ
8) ವಲಸೆ ಪ್ರಮಾಣ ಪತ್ರಕ್ಕಾಗಿ ಅರ್ಜಿ
9) ತಿದ್ದುಪಡಿ ಡಿಪ್ಲೊಮಾ ಪ್ರಮಾಣ ಪತ್ರಕ್ಕಾಗಿ ಅರ್ಜಿ
10) ತಿದ್ದುಪಡಿ ಡಿಪ್ಲೊಮಾ ಪ್ರಮಾಣ ಅಂಕಪಟ್ಟಿಗಾಗಿ ಅರ್ಜಿ
11) ಎಸ್.ಎಸ್.ಎಲ್.ಸಿ ಅರ್ಹತಾ ಪತ್ರ ಪಡೆಯಲು ಅರ್ಜಿ
12) ಡಿಪ್ಲೊಮಾ ಅರ್ಹತಾಪತ್ರ ಪಡೆಯಲು ಅರ್ಜಿ
13) ಕ್ರೋಢೀಕೃತ ಅಂಕಪಟ್ಟಿ ನೀಡುವಿಕೆಗೆ ಅರ್ಜಿ